ಗಲಾಟೆ ಮಾಡುವುದಕ್ಕಿಂತ ನಾವೇ ಒಂದು ಚಿಕ್ಕ ಕಾರ್ಯಕ್ರಮ ಮಾಡೋಣ. ಯಾರ್‍ಯಾರಿಗೆ ಯಾವುದರಲ್ಲಿ ಟ್ಯಾಲೆಂಟ್ ಇದೆಯೋ ಅವರು ಎದುರಿಗೆ ಬಂದು ತೋರಿಸಲಿ. ಹೆಚ್ಚು ಗಲಾಟೆಯಾಗದಂತೆ ಮಾಡಬೇಕು' ಎಂದಿದ್ದ.

ಕಲಿಯುವುದರಲ್ಲಿ ತೀರಾ ಹುಶಾರಿದ್ದ ಅವನ ಮಾತಿಗೆ ನಲವತ್ತೈದು ವಿದ್ಯಾರ್ಥಿಗಳಿದ್ದ ಆ ತರಗತಿಯಲ್ಲಿ ಒಂದು ಬೆಲೆಯಿತ್ತು. ಎಲ್ಲ ಒಪ್ಪಿದ್ದರು. ಒಬ್ಬೊಬ್ಬರಾಗಿ ಮುಂದೆ ಬಂದಿದ್ದರು. ಒಬ್ಬ ಬಂದು ಒಂದೈದು ನಿಮಿಷಗಳ ಮಿಮಿಕ್ರಿ ಮಾಡಿದ್ದ. ಚೆನ್ನಾಗಿತ್ತು. ಚಪ್ಪಾಳೆ ತಟ್ಟಿದ್ದರು. ಇನ್ನೊಬ್ಬನದು ಏಕಪಾತ್ರಾಭಿನಯ. ಅಭಿಮನ್ಯುವಿನದ್ದು. ಅವನ ವೀರಾವೇಷದ ಮಾತುಗಳಿಗೆ ಪುನಃ ಚಪ್ಪಾಳೆ. ಚಪ್ಪಾಳೆಯ ಸದ್ದು ತರಗತಿಯ ಗೋಡೆಗಳನ್ನು ದಾಟಿ ಹೊರ ಹೋಗುತ್ತದೆಂದೆನಿಸಿದಾಗ ಕೃಷ್ಣ ತಡೆಯುತ್ತಿದ್ದ. ಒಬ್ಬ ಹುಡುಗಿ ಎಲ್.ಆರ್. ಈಶ್ವರಿ ಹಾಡಿದ ಸಿನಿಮಾ ಹಾಡನ್ನು ಹಾಡಿದ್ದಳು. ಇನ್ನೊಬ್ಬಳು ಭಕ್ತಿಗೀತೆ. ಮಳೆ ನಿಲ್ಲುವ ಸೂಚನೆ ಕಂಡು ಬಂದಿತ್ತು. ಜೊತೆಗೆ ಕ್ಲಾಸಿನ ಅವಧಿಯೂ. ಹುಡುಗರೆಲ್ಲ ಒತ್ತಾಯಿಸಿದ್ದರು 'ಕೃಷ್ಣ ನಿನ್ನದು ಏನೂ ಇಲ್ಲವೇನೋ...' ಹಾಡಲು ಸುರು ಮಾಡಿದ. 'ನಾ ಕಾದೇ ಕಾದೇ ಕಾದೇ... ರಾಧೇ ನೀ ಬಾರದೆ ಹೋದೇ...' ಸುಮಧುರವಾಗಿ ಹಾಡಿದ್ದ. ಭಾವಪೂರ್ಣ ಹಾಡು. ಅದನ್ನು ಕೇಳುವುದರಲ್ಲಿ ಮುಳುಗಿದವರಿಗೆ ತರಗತಿಯ ಬೆಲ್ಲಾದದ್ದೂ ಕೇಳಿಸಿರಲಿಲ್ಲ. ಮುಂದಿನ ತರಗತಿಯ ಲೆಕ್ಚರರು ಬಾಗಿಲಿನಲ್ಲಿ ಬಂದು ನಿಂತಿದ್ದೂ ಗೊತ್ತಾಗಿರಲಿಲ್ಲ. ಅವನ ಹಾಡು ಮುಗಿದಾಗಲೇ ಎಲ್ಲರಿಗೂ ಎಚ್ಚರ. ಎಚ್ಚತ್ತವರು ಚಪ್ಪಾಳೆ ತಟ್ಟಲು ತಯಾರಾಗುವಾಗ ಲೆಕ್ಚರರು ಒಳ ಬಂದಿದ್ದರು. ತಪ್ಪು ಮಾಡಿ ಸಿಕ್ಕಿಬಿದ್ದವನಂತೆ ಒದ್ದಾಡುತ್ತಿದ್ದ ಕೃಷ್ಣನನ್ನು ಅಲ್ಲಿಯೇ ನಿಲ್ಲಿಸಿಕೊಂಡ ಲೆಕ್ಚರರ್ ಅವನನ್ನು ಹೊಗಳಿದ್ದರು. ಸಮಯವಿದ್ದಿದ್ದರೆ ಇನ್ನೂ ಒಂದೆರಡು ಹಾಡನ್ನು ಹಾಡಿಸಬಹುದಿತ್ತು ಎಂದೂ ಸೇರಿಸಿದವರು ತಾವು ಮಾಡಲೇಬೇಕಿದ್ದ ಕ್ಲಾಸನ್ನು ಶಪಿಸಿದ್ದರು.

ತರಗತಿ ಮುಗಿದು ಹೊರಡುವಾಗ ಇನ್ನೊಮ್ಮೆ 'ಕೃಷ್ಣ ತುಂಬ ಚೆನ್ನಾಗಿ ಹಾಡಿದ್ದೀಯ... ಕೀಪ್ ಇಟ್ ಅಪ್...' ಎಂದು ಹೇಳಿ ಹೋಗಿದ್ದರು. ಅಚಾನಕವಾಗಿ ಇವನ ದೃಷ್ಟಿ ರಾಗಿಣಿಯತ್ತ ತಿರುಗಿದರೆ ಆಕೆ ಧುಮುಗುಟ್ಟುತ್ತಿದ್ದುದು ಕಾಣಿಸಿತ್ತು. ಮತ್ತೆ ಆ ದಿನ ಸಂಜೆ ಮನೆಯ ದಾರಿಯಲ್ಲಿ ರಾಗಿಣಿ 'ಆ ಕರಿ ಮುಸುಡಿಯವ ಕಳೆದ ವರ್ಷದ ನಮ್ಮ ಸ್ಕೂಲ್ ಡೇಯ ಕಾರ್ಯಕ್ರಮವನ್ನು ನೆನಪಿನಲ್ಲಿಟ್ಟುಕೊಂಡೇ ಆ ಹಾಡು ಹೇಳಿದ್ದು... ಅದೂ ನನ್ನನ್ನು ಉದ್ದೇಶಿಸಿಯೇ...' ಎಂದು ಗೆಳತಿಯರೊಂದಿಗೆ ಹೇಳಿದ್ದು ಕೇಳಿಸಿಕೊಂಡ ಇವನನ್ನು ಆ ಧ್ವನಿಯಲ್ಲಿನ ತಿರಸ್ಕಾರ ಇರಿದಿತ್ತು. ಅದಕ್ಕಿಂತ ಹೆಚ್ಚಾಗಿ ಮುಂದುವರಿಸಿದ ಆಕೆ ಹೇಳಿದ ಮಾತು ಕೇಳಿದ ಅವನ ಹೃದಯ ಒಡೆದಿತ್ತು. 'ಅಲ್ಲ ಆ ಸೆಕೆಂಡ್ ಇಯರ್‌ನ ಶಂಕರ ಎಷ್ಟು ಸ್ಮಾರ್ಟ್ ಇದ್ದಾನೆ ಅಲ್ಲವಾ. ನಾನು ಮದುವೆಯಾಗುವುದಾದರೆ ಅವನನ್ನೇ... ಹೈಸ್ಕೂಲು ದಿನಗಳಿಂದಲೂ ಅವನೇ ನನ್ನ ಹೀರೋ... ಅವನನ್ನು ಬಿಟ್ಟು ಈ ಕರಿ ಮುಸುಡಿಯವನನ್ನು ಯಾರು ಕಟ್ಟಿಕೊಳ್ಳುತ್ತಾರೆ.'

ಒಂದು ವರ್ಷ ಮುಂದಿದ್ದ ಆ ಶಂಕರ ಅವರ ಊರಿನವನೇ. ತುಸು ದೂರದಲ್ಲಿ ಮನೆ. ಹೈಸ್ಕೂಲಿಗೆ ಎಲ್ಲರೂ ಚಪ್ಪಲಿಯಿಲ್ಲದ ಕಾಲುಗಳಲ್ಲಿ ನಡೆದೇ ಹೋಗುತ್ತಿದ್ದ ದಿನಗಳಲ್ಲಿ ಚಪ್ಪಲಿ ಹಾಕಿಕೊಂಡು ಸೈಕಲಿನಲ್ಲಿ ಬರುತ್ತಿದ್ದವ ಅವ. ಮುಂದೆ ಕಾಲೇಜಿನ ಮೆಟ್ಟಿಲು ಹತ್ತಿದ್ದೇ ಬೈಕಿನಲ್ಲಿ ಬರಲು ಪ್ರಾರಂಭಿಸಿದ್ದ. ಕಾಲುಗಳಿಗೆ ಶೂ ಬೇರೆ. ಹೈಸ್ಕೂಲು ದಿನಗಳಲ್ಲಿ ಪ್ರತಿದಿನ